# ಕಾಳಿದಾಸನಿಗೆ ವ್ಯಾಸರ ಸವಾಲು



ಕವಿಗಳ ಸುತ್ತ, ಅದರಲ್ಲಿಯೂ ಪೂರ್ವ ಕವಿಗಳ ಸುತ್ತ ಹೆಣೆದುಕೊಳ್ಳುವ ಕಥೆಗಳಿಗೆ ಬರವಿಲ್ಲ. ಕಥೆ ಕಟ್ಟಿದವರಾರು, ಆ ಕಥೆ ವಾಸ್ತವವೆ, ಕಲ್ಪಿತವೆ ಎಂದು ನಿರ್ಧರಿಸುವುದೂ ಕಷ್ಟವೆ. ಆದರೆ ಅವುಗಳ ವಸ್ತು, ಗೂಢಾರ್ಥಗಳು ವಿಶಿಷ್ಟವಾದವು. ರಂಜನೀಯವೂ ಹೌದು. ಅಂತಹ ಪದ್ಯಗಳಲ್ಲಿ ಕಾಳಿದಾಸೋಕ್ತವೆಂದು ಪ್ರಚಾರದಲ್ಲಿರುವ ಸಂಸ್ಕೃತ ಚಾಟು ಪದ್ಯ ಮನಸೆಳೆಯುತ್ತದೆ. ಪದ್ಯಕ್ಕೆ ಹೋಗುವ ಮೊದಲು ಅದರ ಸಂದರ್ಭ ಹಾಗು ಹಿನ್ನೆಲೆಯ ಕಥನವನ್ನು ತಿಳಿಯುವುದು ಸೂಕ್ತ.

ಒಮ್ಮೆ ಪ್ರವಾಸ ಕೈಗೊಂಡ ಕಾಳಿದಾಸ, ವಿಶ್ವೇಶ್ವರನ ದರ್ಶನ ಪಡೆದು, ಕಾಶಿಯಲ್ಲಿ ನೋಡಬಹುದಾದ ಸ್ಥಳಗಳತ್ತ ಹೆಜ್ಜೆ ಹಾಕುತ್ತಾನೆ. ಅವನಿಗೆ ವ್ಯಾಸರ ವಿಗ್ರಹ ಕಾಣಿಸುತ್ತದೆ. ಅದನ್ನು ದರ್ಶಿಸಿದವನು ಸುಮ್ಮನಿರದೆ ಓ, 'ಚಕಾರಕುಕ್ಷಿ ತಾತನರೇ' ಎಂದು ಹಾಸ್ಯ ಮಾಡುತ್ತಾನೆ. ವಿಗ್ರಹದ ಬಳಿಗೆ ಹೋಗಿ, 'ಏನು ತಾತ, ಈ ಹೊಟ್ಟೆ ತುಂಬ ಚಕಾರಗಳೇನ' ಎಂದು ನಗುತ್ತ ವಿಗ್ರಹದ ಹೊಕ್ಕುಳಲ್ಲಿ ಬೆರಳಿಡುತ್ತಾನೆ. ಅಷ್ಟೇ, ಬೆರಳು ಅಲ್ಲಿ ಕಚ್ಚಿಕೊಂಡುಬಿಡುತ್ತದೆ. ಬಿಡಿಸಿಕೊಳ್ಳಲಾಗವುದಿಲ್ಲ. ಆಗ ವಿಗ್ರಹದಿಂದ ಧ್ವನಿ ಕೇಳಿಸುತ್ತದೆ. 'ಏನು ಮೊಮ್ಮಗನೇ, ನನ್ನನ್ನು ಚಕಾರಕುಕ್ಷಿ ಎಂದೆಯಲ್ಲವೆ? ನಾನು ನಿನಗೆ ಹಾಸ್ಯವಾದೆನೆ? ನನ್ನ ಪರೀಕ್ಷೆಯಲ್ಲಿ ಗೆದ್ದು ಬೆರಳನ್ನು ಬಿಡಿಸಿಕೊ.' ಅದಕ್ಕೆ ಕಾಳಿದಾಸ, 'ಸರಸದ ಸಲಿಗೆಯಿಂದ ಹಾಗೆಂದೆ. ನೀನೆಂದರೆ ಗೌರವವಿಲ್ಲೆಂದಲ್ಲ. ಆದರೂ ನಿನ್ನ ಪರೀಕ್ಷೆಗೆ ಸಿದ್ಧನಿದ್ದೇನೆ' ಅಂದ. ಆಗ ವ್ಯಾಸರು, 'ಸರಿ, ಪಾಂಡವರಿಗೆ ದ್ರೌಪದಿಯೊಂದಿಗಿನ ಸಂಬಂಧ ಕುರಿತೊಂದು ಶ್ಲೋಕ ಹೇಳು.